# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 110

## ರಾತ್ರಿಯಲ್ಲಿ ರಜಸ್ವಲೆಯಾದರೆ, ಜನನ-ಮರಣಗಳಾದರೆ ಯಾವ ದಿವಸಕ್ಕೆ ಲೆಕ್ಕ ಹಾಕುವದು?

ಪೂಜ್ಯ ಆಚಾರ್ಯರಿಗೆ ಭಕ್ತಿಯಿಂದ ನಮಸ್ಕಾರಗಳನ್ನು ಮಾಡುತ್ತಿದ್ದೇನೆ.
ನಿಮ್ಮ ಭಾಗವತ ಉಪನ್ಯಾಸಗಳು ನಮ್ಮನ್ನು ಧನ್ಯಗೊಳಿಸುತ್ತಿವೆ. ಇದುವರೆಗೂ ತಿಳಿಯದ ತುಂಬ ವಿಷಯಗಳನ್ನು ತಿಳಿಯುತ್ತಿದ್ದೇವೆ. ನನ್ನ ಒಂದು ಪ್ರಶ್ನೆಯಿದೆ. ಅನೇಕ ಜನರನ್ನು ಕೇಳಿದರೂ ಸರಿಯಾದ ಉತ್ತರ ದೊರೆಯಲಿಲ್ಲ.  ದಯವಿಟ್ಟು ತಪ್ಪು ತಿಳಿಯದೇ ಉತ್ತರಿಸಬೇಕಾಗಿ ವಿನಂತಿ.

ರಾತ್ರಿಯ ಹೊತ್ತು ರಜಸ್ವಲೆಯಾದಾಗ ಕೆಲವು ಬಾರಿ ಆ ದಿವಸಕ್ಕೂ ಕೆಲವು ಬಾರಿ ಮಾರನೆಯ ದಿವಸಕ್ಕೂ ಲೆಕ್ಕ ಹಿಡಿಯುತ್ತಾರೆ. ಇದರ ಲೆಕ್ಕ ಹೇಗೆ ಹಾಕುವದು ತಿಳಿಸಿ.

— ಪೂರ್ಣಪ್ರಜ್ಞ. ಬೆಂಗಳೂರು.

ಕೇವಲ ರಜೋದರ್ಶನಕ್ಕಲ್ಲ. ಜನನ ಮರಣಗಳಿಂದ ಉಂಟಾಗುವ ಅಶೌಚಕ್ಕೂ ಈ ರೀತಿಯ ಲೆಕ್ಕಾಚಾರ ಹಾಕಬೇಕು.

ಒಟ್ಟು ಮೂರು ರೀತಿಯ ಲೆಕ್ಕಾಚಾರಗಳನ್ನು ಶಾಸ್ತ್ರ ತಿಳಿಸುತ್ತದೆ.

ಲೆಕ್ಕ ಹಾಕುವದು ತುಂಬ ಸರಳ. ಒಂದೊಂದಾಗಿ ವಿವರಿಸುತ್ತೇನೆ —

## Step —1

ಯಾವ ರಾತ್ರಿಯಲ್ಲಿ ಜನನವಾಗಿದೆಯೋ, ಮರಣವಾಗಿದೆಯೋ ಅಥವಾ ರಜಸ್ವಲೆಯಾಗಿದ್ದಾರೆಯೋ ಆ ದಿವಸ ಹಗಲು ಸೂರ್ಯೋದಯ ಮತ್ತು ಸೂರ್ಯಾಸ್ತ ಎಷ್ಟು ಹೊತ್ತಿಗೆ ಆಗಿತ್ತು ಎನ್ನುವದನ್ನು ತಿಳಿದುಕೊಳ್ಳಿ.

## Step —2

ಸೂರ್ಯೋದಯದಿಂದ ಸೂರ್ಯಾಸ್ತವದವರೆಗಿನ ನಿಮಿಷಗಳನ್ನು ಲೆಕ್ಕ ಹಾಕಿ. (ಸೂರ್ಯೋದಯ ಸೂರ್ಯಾಸ್ತಗಳು ಪ್ರತೀ 144 ಮೀಟರಿಗೆ ಒಂದು

ಸೆಕೆಂಡಿನಂತೆ ಬದಲಾಗುತ್ತದೆ. ಪಂಚಾಂಗಗಳಲ್ಲಿ ಯಾವುದೋ ಒಂದು ಊರಿನ ಸೂರ್ಯೋದಯ ಕೊಟ್ಟಿರುತ್ತಾರೆ. ಉಪಯೋಗವಿಲ್ಲ.  ನೀವಿರುವ ಪ್ರದೇಶದ ನಿಖರ ಸೂರ್ಯೋದಯ ಸೂರ್ಯಾಸ್ತಗಳು ಇಂಟರ್ನೆಟ್ಟಿನಲ್ಲಿ ದೊರೆಯುತ್ತದೆ. ಅದನ್ನು ಪಡೆದು ಲೆಕ್ಕ ಹಾಕಿಕೊಳ್ಳಿ.)

## Step —3

ಸೂರ್ಯೋದಯ ಮತ್ತು ಸೂರ್ಯಾಸ್ತದ ಅಂತರದ ನಿಮಿಷಗಳನ್ನು 1440 ರಲ್ಲಿ ಕಳೆಯಿರಿ. (ಒಂದು ದಿವಸಕ್ಕೆ 60 ಗಳಿಗೆಗಳು. ಒಂದು ಗಳಿಗೆಗೆ 24 ನಿಮಿಷ. ಹೀಗಾಗಿ 60 ಗಳಿಗೆ ಎಂದರೆ 1440 ನಿಮಿಷಗಳು.

## Step —4

ಕಳೆದಾಗ ಉಳಿದದ್ದನ್ನು ಎಂಟು ಭಾಗ ಮಾಡಿ.

ಆ ಎಂಟು ಭಾಗದಲ್ಲಿ ಮೊದಲ ಐದು ಭಾಗದೊಳಗೆ ಜನನ, ಮರಣ,

ರಜೋದರ್ಶನಗಳಾಗಿದ್ದರೆ ಆ ದಿವಸದ ಲೆಕ್ಕ. ಕಡೆಯ ಮೂರು ಭಾಗದೊಳಗಾದರೆ ಮಾರನೆಯ ದಿವಸಕ್ಕೆ ಲೆಕ್ಕ.

ಉದಾಹರಣೆ —

ಗುರುವಾರ ಸೂರ್ಯೋದಯ — 6:27AM
ಗುರುವಾರ ಸೂರ್ಯಾಸ್ತ — 5:59 PM

ಸೂರ್ಯಾಸ್ತದಿಂದ ಸೂರ್ಯೋದಯವನ್ನು ಕಳೆಯಲು ಸೂರ್ಯಾಸ್ತವನ್ನು 24ಗಂಟೆಗಳ ಲೆಕ್ಕಕ್ಕೆ ಪರಿವರ್ತಿಸಿ.

17:59 - 06:27 = 11:32

ಇದನ್ನು ನಿಮಿಷಗಳಾಗಿ ಪರಿವರ್ತಿಸಿ.

11X60= 660

660+32=692

ಅಂದರೆ ಸೂರ್ಯೋದಯದಿಂದ ಸೂರ್ಯಾಸ್ತದವರೆಗಿನ ಸಮಯ 11 ಗಂಟೆ 32 ನಿಮಿಷಗಳು. ಅಥವಾ 692 ನಿಮಿಷಗಳು. ಇದನ್ನು 1440 ರಲ್ಲಿ ಕಳೆಯಿರಿ.

1440 - 692 = 748

ಇದನ್ನು ಎಂಟು ಭಾಗ ಮಾಡಿ.

748/8=93.5

ಚುಕ್ಕೆಯಿಂದ ಮುಂದಿರುವ ಸಂಖ್ಯೆ ಸೆಕೆಂಡನ್ನು ಸೂಚಿಸುತ್ತದೆ. ಅದನ್ನು 60ರಿಂದ ಗುಣಿಸಿದರೆ ನಿಖರವಾದ ಸೆಕೆಂಡು ದೊರೆಯುತ್ತದೆ.

.5 x 60 = 30.

ಅಂದರೆ 93 ನಿಮಿಷ 30 ಸೆಕೆಂಡುಗಳು ಒಂದು ಭಾಗ.

ಇದನ್ನು ಐದರಿಂದ ಗುಣಿಸಿ.

93.5X5=467.5

ಸೂರ್ಯಾಸ್ತವಾದ ಸಮಯದಿಂದ 467 ನಿಮಿಷ 30 ಸೆಕೆಂಡಿನಲ್ಲಿ ಅಥವಾ ಅದಕ್ಕಿಂತ ಮುಂಚೆ ಜನನ, ಮರಣ, ರಜೋದರ್ಶನವಾದಲ್ಲಿ ಆ ದಿವಸದ ಲೆಕ್ಕ. ಆ ನಂತರ ಆದಲ್ಲಿ ಮಾರನೆಯ ದಿವಸದ ಲೆಕ್ಕ.

467 ನಿಮಿಷಗಳನ್ನು ಗಂಟೆಗಳಾಗಿ ಪರಿವರ್ತಿಸಲು 60ರಿಂದ ಭಾಗಿಸಿ.

```
60)   467    (7
     420
     ——
     047
```

ಅಂದರೆ ಸೂರ್ಯಾಸ್ತವಾದ ನಂತರ 7 ಗಂಟೆ 47 ನಿಮಿಷ 30 ಸೆಕೆಂಡುಗಳವರೆಗೆ ಹಿಂದಿನ ದಿವಸದ ಲೆಕ್ಕ. ಅಲ್ಲಿಂದ ಮುಂದೆ ಮಾರನೆಯ ದಿವಸದ ಲೆಕ್ಕ.  ಸೂರ್ಯಾಸ್ತ ಸಮಯಕ್ಕೆ ಇದನ್ನು ಸೇರಿಸಿ.

```
 5:59:00
 7:47:30
 ————
13:46:30
```

ರಾತ್ರಿ ಹನ್ನೆರಡು ಗಂಟೆಗೆ ಇಂಗ್ಲೀಷಿನ ಲೆಕ್ಕದಲ್ಲಿ ಸಮಯ ಪುನರಾರಂಭವಾಗುತ್ತದೆ. ಹೀಗಾಗಿ ಮಧ್ಯರಾತ್ರಿ 1 ಗಂಟೆ 46 ನಿಮಿಷ 30 ಸೆಕೆಂಡಿನ ಒಳಗೆ ಜನನ ಮರಣ ರಜೋದರ್ಶನವಾದರೆ ಹಿಂದಿನ ದಿವಸದ ಲೆಕ್ಕ. ಅಂದರೆ ಮೂರು ದಿವಸದ ಮೈಲಿಗೆಯಾದರೆ ಗುರುವಾರ, ಶುಕ್ರವಾರ, ಶನಿವಾರ ಮೈಲಿಗೆ. ಭಾನುವಾರ ನೀರು.

ಆ ಸಮಯದ ನಂತರ ಆದರೆ, ಶುಕ್ರವಾರ, ಶನಿವಾರ, ಭಾನುವಾರ ಮೈಲಿಗೆ. ಸೋಮವಾರ ನೀರು.

ಹೀಗೆಯೇ ಒಂದು ದಿವಸದ ಸೂತಕ, ಒಂದೂವರೆ ದಿವಸದ ಸೂತಕ, ಮೂರು ದಿವಸದ ಸೂತಕ, ಹತ್ತು ದಿವಸದ ಸೂತಕಗಳನ್ನು ಲೆಕ್ಕ ಹಾಕಬೇಕು.

## ರಜೋದರ್ಶನಕ್ಕೆ ಎರಡನೆಯ ಕ್ರಮ

ಈ ಲೆಕ್ಕವಲ್ಲದೇ, ಕೇವಲ ರಜಸ್ವಲೆಯರ ವಿಷಯದಲ್ಲಿ ಶಾಸ್ತ್ರ ಮತ್ತೊಂದು ಲೆಕ್ಕವನ್ನೂ ನೀಡುತ್ತದೆ.

**ರಾತ್ರೌ ತೃತೀಯಭಾಗಾತ್ ಪ್ರಾಗ್**
**ಯದಿ ವಾಸಸಿ ಯೋಷಿತಾಮ್ ||**
**ಮಲಂ ಸ್ಯಾಚ್ಚೇತ್ ತ್ರಿಭಾಗೇನ**
**ಪೂರ್ವೇಣಾಹ್ನಾ ತು ಶುದ್ಧ್ಯತಿ ||**

**ತೃತೀಯಭಾಗೇ ಸಂಪ್ರಾಪ್ತೇ**
**ಮಲಂ ಸ್ಯಾನ್ನಿಶಿ ಚೇತ್ ಸ್ತ್ರಿಯಃ |**
**ಪ್ರಭಾತಾದಿ ತ್ರಿರಾತ್ರಂ ಸ್ಯಾತ್-**
**ಅಶುಚಿರ್ವರವರ್ಣಿನೀ ||**

ಸೂರ್ಯಾಸ್ತದಿಂದ  ಮುಂದಿನ ಸೂರ್ಯೋದಯದವರೆಗಿನ ಸಮಯ ತೆಗೆದುಕೊಳ್ಳಬೇಕು.

ಅದನ್ನು ಮೂರು ಭಾಗ ಮಾಡಬೇಕು.

ಅದರಲ್ಲಿ ಮೊದಲ ಎರಡು ಭಾಗದಲ್ಲಿ ರಜೋದರ್ಶನವಾದರೆ[1] ಹಿಂದಿನ ದಿವಸದ ಲೆಕ್ಕ.

ಮೂರನೆಯ ಭಾಗದಲ್ಲಿ ರಜೋದರ್ಶನವಾದರೆ ಮಾರನೆಯ ದಿವಸದಿಂದ ಲೆಕ್ಕ.
ಉದಾಹರಣೆ.

ಬುಧವಾರ ರಾತ್ರಿ 1:20ಕ್ಕೆ ರಜೋದರ್ಶನವಾಗಿದೆ. ಬುಧವಾರದಿಂದ ಲೆಕ್ಕ ಹಿಡಿಯಬೇಕೋ, ಗುರುವಾರದಿಂದ ಲೆಕ್ಕ ಹಿಡಿಯಬೇಕೋ ಎಂದು ಪ್ರಶ್ನೆ.

ಬುಧವಾರ ಸೂರ್ಯಾಸ್ತ — 5:59 [17:53]
ಗುರುವಾರ ಸೂರ್ಯೋದಯ — 6:27

ರಾತ್ರಿ ಹನ್ನೆರಡಕ್ಕೆ ಸಮಯ ಬದಲಾಗುವದರಿಂದ ಸೂರ್ಯೋದಯಕ್ಕೆ 12 ಸೇರಿಸಿ.
06:27+12:00=18:27

---

[1] ರಜೋದರ್ಶನದ ಊಹೆಯಲ್ಲ. ಹೆಣ್ಣಿಗೆ ತಿಳಿಯುವ ಸಮಯದಿಂದಲೇ ಲೆಕ್ಕ.

ಅದರಲ್ಲಿ ಸೂರ್ಯಾಸ್ತದ ಸಮಯವನ್ನು ಕಳೆಯಿರಿ.

18:27 - 5:59 = 12:28

ಬುಧವಾರ ಸೂರ್ಯಾಸ್ತದಿಂದ ಗುರುವಾರ ಸೂರ್ಯೋದಯದವರೆಗಿನ ಸಮಯ 12:28

ಇದನ್ನು ನಿಮಿಷಗಳಾಗಿ ಪರಿವರ್ತಿಸಿ.
12X60=720+28=748

ಅದನ್ನು ಮೂರು ಭಾಗ ಮಾಡಿ.

3) 748 (249.3
6
—
14
12
—
28
27
—
10
09
—
01

ಅಂದರೆ 249 ನಿಮಿಷ 18 ಸೆಕೆಂಡುಗಳು ಒಂದು ಭಾಗ.

ಎರಡು ಭಾಗ 498 ನಿಮಿಷ 36 ಸೆಕೆಂಡುಗಳು. ಅಂದರೆ 8 ಗಂಟೆ 24 ನಿಮಿಷ 36 ಸೆಕೆಂಡುಗಳು.

ಇದನ್ನು ಸೂರ್ಯಾಸ್ತಕ್ಕೆ ಸೇರಿಸಿ —

5:59+8:24:39=14:23

ಅಂದರೆ ರಾತ್ರಿ ಎರಡು ಗಂಟೆ ಇಪ್ಪತ್ಮೂರು ನಿಮಿಷಕ್ಕೆ ಅಥವಾ ಅದಕ್ಕಿಂತ ಮುಂಚೆ ರಜಸ್ವಲೆಯಾದರೆ ಬುಧವಾರದಿಂದ ಲೆಕ್ಕ. ಆ ನಂತರ ಆದರೆ ಗುರುವಾರದಿಂದ ಲೆಕ್ಕ.

## ಮೂರನೆಯ ಲೆಕ್ಕ

ಮೂರನೆಯದು ಇನ್ನೂ ಸರಳ.

ಅತ್ಯಂತ ಕಠಿಣ ನಿಯಮವನ್ನನುಸರಿಸುವವರು ಮತ್ತು ಹೆಚ್ಚಿನ ರಜಃಸ್ರಾವ ಆಗುವವರು ಇದೇ ನಿಯಮವನ್ನು ಅನುಸರಿಸಬೇಕು. ಸೂರ್ಯೋದಯವಾಗುವರೆಗೆ ಹಿಂದಿನ ದಿವಸ ಎಂದೇ ಲೆಕ್ಕ.

**ರಾತ್ರಾವೇವ ಸಮುತ್ಪನ್ನೇ**
**ಮೃತೇ ರಜಸಿ ಸೂತಕೇ ।**
**ಪೂರ್ವಮೇವ ದಿನಂ ಗ್ರಾಹ್ಯಂ**
**ಯಾವನ್ನೋದಯತೇ ರವಿಃ ।।**

ಮೂರು ರೀತಿಯ ಲೆಕ್ಕಗಳನ್ನೂ ಶಾಸ್ತ್ರವೇ ನೀಡಿರುವದರಿಂದ ಯಾವುದನ್ನು ಮಾಡುವದರಿಂದ ಮನಸ್ಸಿಗೆ ಕಸಿವಿಸಿಯುಂಟಾಗುವದಿಲ್ಲವೋ ಆ ಮಾರ್ಗವನ್ನು ಅನುಸರಿಸಬೇಕು. ತಪ್ಪಿಲ್ಲ.

## ಮೈಲಿಗೆಯ ಆಚರಣೆಗೆ ಮಾತ್ರ ಈ ಲೆಕ್ಕ

ಅತ್ಯಂತ ಮುಖ್ಯವಾಗಿ ಗಮನಿಸಬೇಕಾದ ಅಂಶ — ಇದು ಕೇವಲ ಅಶೌಚದ ಲೆಕ್ಕಕ್ಕೆ ಮಾತ್ರ. ಮಗು ಸೂರ್ಯೋದಯಕ್ಕಿಂತ ಹಿಂದಿನ ನಿಮಿಷದಲ್ಲಿ ಹುಟ್ಟಿದರೂ, ಸಾವಾದರೂ ನಾವು ಹಿಂದಿನ ದಿವಸದ ವಾರವನ್ನೇ ಲೆಕ್ಕ ಹಿಡಿಯುವದು. ಉದಾಹರಣೆಗೆ ಶುಕ್ರವಾರ ಸೂರ್ಯೋದಯಕ್ಕಿಂತ ಒಂದು ನಿಮಿಷ ಮೊದಲು ಮಗು ಹುಟ್ಟಿದರೆ ಮಗು ಹುಟ್ಟಿದ್ದು ಗುರುವಾರ ಎಂದೇ ಜಾತಕದಲ್ಲಿ ಬರೆಯಬೇಕು. ಅದೇ ರೀತಿಯ ಫಲವನ್ನೂ ನುಡಿಯಬೇಕು. ಅಶೌಚದ ಆಚರಣೆಗೆ ಮಾತ್ರ ಮೇಲಿನ ಲೆಕ್ಕ.

— ವಿಷ್ಣುದಾಸ ನಾಗೇಂದ್ರಾಚಾರ್ಯ

ವಿಶ್ವನಂದಿನಿಯ ಲೇಖನ, ಉಪನ್ಯಾಸ, ಪ್ರಶ್ನೋತ್ತರಗಳು
Vishwanandini App ಮತ್ತು
www.vishwanandini.com Website ಗಳ

ಮುಖಾಂತರ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯವಿದೆ.

# Help Vishwanandini to achieve its goal

ಶ್ರೀಮನ್ ಮಧ್ವಶಾಸ್ತ್ರವನ್ನು ಉಪನ್ಯಾಸ ಲೇಖನಗಳ ಮುಖಾಂತರ ಶಾಶ್ವತವಾಗಿ ದಾಖಲಿಸಿಡುತ್ತಿರುವ ವಿಶ್ವನಂದಿನಿಗೆ ತನ್ನ ಗಮ್ಯ ತಲುಪಲು ಸಜ್ಜನರ ಸಹಾಯದ ಅಗತ್ಯವಿದೆ.

ನೀವು ನೀಡುವ ಹಣ ಶ್ರೀಮದ್ ಭಾಗವತ ಮತ್ತು ಸಂಸ್ಕೃತಸುರಭಿ ಮುಂತಾದವುಗಳ ಮುಖಾಂತರ ಸಮಗ್ರ ಸಮಾಜವನ್ನು ಮುಟ್ಟುತ್ತದೆ.

**ಹಣ ನೀಡಲೇಬೇಕೆಂಬ ನಿರ್ಬಂಧ ಸರ್ವಥಾ ಇಲ್ಲ. ನಿಮ್ಮ ಆರ್ಥಿಕ ಪರಿಸ್ಥಿತಿಗೆ ಎಳ್ಳಷ್ಟೂ ತೊಂದರೆಯಾಗದಿದ್ದಲ್ಲಿ ಮಾತ್ರ ಸಹಾಯ ಮಾಡಬಹುದು.**

| | |
|---|---|
| Account Number | **35368588017** |
| Account Type | Current Account |
| Bank | State Bank of India |
| Branch | T. Narasipura, Mysore |
| IFSC | SBIN0013233 |

Please WhatsApp the transaction details to
**9901551491**